ಮಾಡಿರುತ್ತೆ. ಕಾರ್ಖಾನೆಯ ಸ್ಥಾಪನೆಗೆ ಇನ್ನೂ ಹಣದ ಅವಶ್ಯಕತೆ ಇದ್ದು ಉನ್ನತ ಮಟ್ಟದ ಹಣಕಾಸು ಸಂಸ್ಥೆಗಳಿಂದ ಒಟ್ಟು ೫೪೦–೦೦ ಲಕ್ಷ ರೂ.ಗಳ ಸಾಲವನ್ನು ಪಡೆಯಲು ಕಾರ್ಖಾನೆ ಪ್ರಸ್ತಾಪಿಸಿದೆ. ಅಲ್ಲದೆ ಈ ಕಾರ್ಖಾನೆಗೆ ಕೇಂದ್ರ ಸರ್ಕಾರದವರು ನೀಡಿದ ಕೈಗಾರಿಕಾ ಪರವಾನಗಿಯ ಅವಧಿ ಡಿಸೆಂಬರ್ ೮೭ಕ್ಕೆ ಮುಗಿದಿದ್ದು, ಸದರಿ ಅವಧಿಯನ್ನು ವಿಸ್ತರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಕೇಂದ್ರ ಸರ್ಕಾರದ ತೀರ್ಮಾನ ಇನ್ನೂ ಬಂದಿರುವುದಿಲ್ಲ.

ಈ) ಕಾರ್ಖಾನೆಯ ಸ್ಥಾಪನೆಗಾಗಿ ೧೭೬.೩ ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ.

ಉ) ವಿಜಾಪುರ ಜಿಲ್ಲೆಯಲ್ಲಿ ಸಧ್ಯಕ್ಕೆ ಗೋದಾವರಿ ಸಕ್ಕರೆ ಕಾರ್ಖಾನೆಯೊಂದು ಮಾತ್ರ ಇದೆ. ಸದರಿ ಕಾರ್ಖಾನೆಗೆ ಸುಮಾರು ೨ ಲಕ್ಷ ಮೆ. ಟನ್ ಕಬ್ಬಿನ ಅವಶ್ಯಕತೆ ಇದ್ದು ವಿಜಾಪುರ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಸುಮಾರು ೯ರಿಂದ ೧೦ ಲಕ್ಷ ಮೆ. ಟನ್‌ಗಳಷ್ಟು ಕಬ್ಬು ರವಾನೆಯಾಗುತ್ತಿದೆ.

ವಿದ್ಯಾರ್ಥಿನಿಲಯಗಳಿಗೆ ಧನಸಹಾಯ ಕುರಿತು

೧೫೪೧. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇದುವರೆವಿಗೂ ೧೯೮೭ ಮತ್ತು ೧೯೮೮ನೇ ಸಾಲಿನಲ್ಲಿ ಯಾವುದೇ ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಧನಸಹಾಯ ಮಾಡಬಾರದೆಂದು ಇಲಾಖೆಯ ನಿರ್ದೇಶಕರು ಜಿಲ್ಲಾ ಪರಿಷತ್ತುಗಳಿಗೆ ನಿರ್ದೇಶನ ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ, ಇದು ಗ್ರಾಮಾಂತರ ಶಿಕ್ಷಣ ಸಂಸ್ಥೆಗಳಿಗೆ ಘಾತಕವಾಗುವುದಿಲ್ಲವೇ?

ಇ) ಈ ಆಜ್ಞೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರವು ಮರು ಆಲೋಚನೆ ಮಾಡುವುದೇ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಹಕಾರಿ ಸಕ್ಕರೆ ಕಾರ್ಖಾನೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವುದು

೧೫೦೩. ಶ್ರೀಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಕೈಗಾರಿಕಾ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾನಿಯಲ್ಲಿ ಇಲ್ಲದೇ ಇರುವ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡಿರುವುದಕ್ಕೆ ಕಾರಣವೇನು?

ಆ) ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರುವುದಕ್ಕೆ ಬದಲು ರಾಜ್ಯ ಮಟ್ಟದಲ್ಲಿ ತಾಂತ್ರಿಕ ಆಡಳಿತಗಾರರನ್ನು ನೇಮಕಾತಿ ಮಾಡಿ ಸರ್ಕಾರದಿಂದಲೇ ನಡೆಸುವುದಕ್ಕೆ ಇರುವ ತೊಂದರೆಗಳೇನು?

ಇ) ರಾಜ್ಯ ಮಟ್ಟದಲ್ಲಿ ಸಕ್ಕರೆ ಮಹಾಮಂಡಳದ ಕೆಲಸವೇನು?

ಈ) ಎಷ್ಟು ಕಾರ್ಖಾನೆಗಳನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲಿದೆ?

ಶ್ರೀ ಜೆ. ಎಚ್. ಪಟೀಲ್(ಮಾನ್ಯ ಕೈಗಾರಿಕಾ ಸಹಕಾರ ಸಚಿವರು)

ಅ) ಇಂತಹ ಪ್ರಕರಣ ಯಾವುದೂ ನಡೆದಿರುವುದಿಲ್ಲ.

ಆ) ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಅಥವಾ ಬೇರೆಯವರಿಗೆ ಮಾರಾಟ ಮಾಡಲು ತೀರ್ಮಾನಿಸಿರುವುದು ಈ ಕೆಳಕಂಡ ಅಂಶಗಳು ಕಾರಣಗಳಾಗಿವೆ.

೧) ಕಾರ್ಖಾನೆಯು ವಿಪರೀತ ಹಾನಿಗೊಳಗಾಗಿರುವುದು,

೨) ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬು ನುರಿಯಂದೇ ಇರುವುದು ಅಥವಾ ಕಾರ್ಖಾನೆಯ ಕಾರ್ಯ ಕ್ಷೇತ್ರದಲ್ಲಿ ಕಾರ್ಖಾನೆಗೆ ಬೇಕಾಗುವಷ್ಟು ಕಬ್ಬು ಕ್ಷೇತ್ರ ಇಲ್ಲದೇ ಇರುವುದು.

೩) ಕಾರ್ಖಾನೆಯು ಉನ್ನತ ಹಾಗೂ ಇತರೆ ಹಣಕಾಸು ಸಂಸ್ಥೆಗಳಿಗೆ ಸಕಾಲದಲ್ಲಿ ಸಾಲದ ಕಂತಂಗಳು ಮತ್ತು ಬಡ್ಡಿಯನ್ನು ಪಾವತಿ ಮಾಡದೆ ಸಚಿವಾದಾರರಾಗಿರುವುದು.

೪) ಕಾರ್ಖಾನೆಯನ್ನು ಪುನರಂಜೀವನಗೊಳಿಸಲು ಸಾಧ್ಯವಾಗದೇ ಇರುವುದು.

ಈ ಮೇಲ್ಕಂಡ ನಾಲ್ಕು ಮುಖ್ಯ ಕಾರಣಗಳು ಕಾರ್ಖಾನೆಯನ್ನು ಸಮಾಪನಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಇದರ ಬದಲು ಸರ್ಕಾರವೇ ಕಾರ್ಖಾನೆಗಳನ್ನು ನಡೆಸುವುದಕ್ಕೆ ಹಲವಾರು ತೊಂದರೆಗಳಿರುತ್ತವೆ ಎಂತ್ತು ಅವುಗಳು ಈ ಕೆಳಕಂಡಂತಿವೆ.

೧) ಕಾರ್ಖಾನೆಯನ್ನು ನಡೆಸಲು ಪ್ರತ್ಯೇಕ ತಾಂತ್ರಿಕ ಸಿಬ್ಬಂದಿ ಇಲ್ಲದೆ ಇರುವುದು.

೨) ಹಣಕಾಸು ಸಂಸ್ಥೆಗಳಿಂದ ಕಾರ್ಖಾನೆಗಳು ಸಾಲ ಪಡೆಯುವಾಗ ಸರ್ಕಾರದವರು ಶೇ ೧೦೦ರಷ್ಟು ಖಾತ್ರಿ ಕೊಟ್ಟಿರುತ್ತಾರೆ. ಹಣಕಾಸು ಸಂಸ್ಥೆಗಳವರು ಸದರಿ ಸಾಲವನ್ನು ಕಾರ್ಖಾನೆಗಳು ಮರುಪಾವತಿ ಮಾಡದಿದ್ದಲ್ಲಿ ಸರ್ಕಾರವೇ ಈ ಹಣವನ್ನು ತುಂಬಲು ನೋಟೀಸ್ ಕೊಟ್ಟಿರುತ್ತಾರೆ. ಇದು ಬಹಳ ಅಹಿತಕರ ಮತ್ತು ಅಸಾಧ್ಯವಾದ ಪರಿಸ್ಥಿತಿ ಯಾಗಿರುತ್ತದೆ. ಆದುದರಿಂದ ಕಾರ್ಖಾನೆಯನ್ನು ಮಾರಾಟ ಮಾಡಿ, ಬಂದ ಹಣದಿಂದ ಸರ್ಕಾರದ ಹಾಗೂ ಹಣಕಾಸು ಸಂಸ್ಥೆಗಳ ಮತ್ತು ನೌಕರರ ವೇತನ ಬಾಕಿ ಇತ್ಯಾದಿಗಳನ್ನು ಚುಕ್ತ ಮಾಡಲು ಅನುಕೂಲವಾಗುತ್ತದೆ.

೫) ರಾಜ್ಯ ಮಟ್ಟದಲ್ಲಿರುವ ಸಕ್ಕರೆ ಮಹಾಮಂಡಳಿಯು ಕೆಲಸಕಾರ್ಯಗಳು ಈ ಕೆಳಕಂಡಂತಿವೆ :

೧) ರಾಜ್ಯ ದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ತಾಂತ್ರಿಕ ಸಲಹೆ ನೀಡುವುದು.

೨) ತಾಂತ್ರಿಕ ನಿರ್ಮಾಣ ಯೋಜನೆ ಬಗ್ಗೆ ಶಕ್ಯ ಮತ್ತು ಸಾಮರ್ಥ್ಯದ ಬಗ್ಗೆ ಮೌಲ್ಯ ನಿರ್ಣಯಿ ಸುವುದು.

೩) ಮಹಾಮಂಡಳಿಯಲ್ಲಿರುವ ತಾಂತ್ರಿಕ ಸಲಹೆಗಾರರ ನೆರವು ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಆಗತ್ಯವಾದಾಗಲೆಲ್ಲ ದೊರಕಿಸಿ ಕೊಡುವುದು.

೪) ರಾಜ್ಯದಲ್ಲಿರುವ ಎಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಗಳೂ ಮಹಾಮಂಡಳಿಯಲ್ಲಿರುವ ತಾಂತ್ರಿಕ ಸಲಹೆಗಾರರ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಾ ಬಂದಿವೆ.

೫) ಮಹಾಮಂಡಳಿಯು ಸದಸ್ಯ ಸಹಕಾರ ಸಕ್ಕರೆ ಕಾರ್ಖಾನೆಗಳಿಗೋಸ್ಕರವೇ ರಚಿತವಾಗಿರು ವುದರಿಂದ ಇದರ ಅಧಿಕಾರವೆಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಗಳದ್ದೇ ಆಗಿದೆ.

೬) ಮಹಾಮಂಡಳಿಯ ಛೇರ್ಮನ್ನರು ಸದಸ್ಯ ಸಹಕಾರ ಸಕ್ಕರೆ ಕಾರ್ಖಾನೆಗಳಿಂದಲೇ ಆಯ್ಕೆ ಮಾಡಲ್ಪಡುವರು.

೭) ಮಹಾಮಂಡಳಿಯು ಸದಸ್ಯ ಸಹಕಾರಿ ಸಕ್ಕರೆ ಕಾರ್ಖಾನೆಗಳ ಕೆಲಸ ಕಾರ್ಯಗಳು ಸೂಕ್ತ ರೀತಿಯಲ್ಲಿ ನಡೆಯುವಲ್ಲಿ ಆನುವಾಗುವುದು.

ಈ) ಸಧ್ಯಕ್ಕೆ ಇಂತಹ ಪ್ರಸಂಗ ಯಾವುದೂ ಉದ್ಭವಿಸಿರುವುದಿಲ್ಲ. ಮತ್ತು ಸಹಕಾರಿ ಕಾನೂನು ಉಲ್ಲಂಘನೆ ಮಾಡುವ ಕಾರ್ಖಾನೆಗಳ ಮೇಲೆ ಕಾನೂನಿನ ರೀತಿ ಕ್ರಮ ಕೈಗೊಳ್ಳಲಾಗುವುದು.